# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2111
2) ಸದಸ್ಯರ ಹೆಸರು : ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು)
3) ಉತ್ತರಿಸಬೇಕಾದ ದಿನಾಂಕ : 25-03-2026
4) ಉತ್ತರಿಸಬೇಕಾದ ಸಚಿವರು : ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

| | ಪ್ರಶ್ನೆ | ಉತ್ತರ |
|---|---|---|
| ಅ) | ಕರಾವಳಿ CRZ ಪ್ರದೇಶ ಗಳಲ್ಲಿ ಮೀನುಗಾರಿಕೆ ಸಂಬಂಧಿತ ಚಟುವಟಿಕೆ ಗಳನ್ನು ಪ್ರಾರಂಭಿಸಲು ಪ್ರಸ್ತುತ ಜಾರಿಯಲ್ಲಿರುವ ನಿಯಮಗಳು ಮತ್ತು ಮಾರ್ಗಸೂಚಿಗಳೇನು; CRZ ವಲಯದಲ್ಲಿ ಮೀನು ಸಾಕಾಣಿಕಾ ಮತ್ತು ಸಂಸ್ಕರಣ ಘಟಕಗಳನ್ನು ಸ್ಥಾಪಿಸಲು ಇರುವ ಪ್ರಮಾಣೀಕೃತ ಕಾರ್ಯವಿಧಾನಗಳೇನು; | 1. ಸಿ ಆರ್ ಝಡ್ ವಲಯದಲ್ಲಿ ಮೀನು ಸಾಕಾಣಿಕೆ ಬಗ್ಗೆ<br><br>ಭಾರತ ಸರ್ಕಾರವು ಕರಾವಳಿ ಜಲಕೃಷಿ ಪ್ರಾಧಿಕಾರ (ಸಿ.ಎ.ಎ) 2005 ದಿನಾಂಕ: 14/08/2023 -ರಂದು ತಿದ್ದುಪಡಿಯನ್ನು ತಂದು ಪರಿಸರ ಸಂರಕ್ಷಣೆ - ಕಾಯ್ದೆ 1986 ರಡಿಯಲ್ಲಿ ಅಧಿಸೂಚಿತಗೊಂಡಿರುವ ಕರಾವಳಿ ನಿಯಂತ್ರಣ ವಲಯ ಅಧಿಸೂಚನೆಯಲ್ಲಿ ನಮೂದಿಸಿರುವ ವ್ಯಾಪ್ತಿಯಿಂದ ನಿಷೇಧಿತ ಚಟುವಟಿಕೆಗಳ ವ್ಯಾಪ್ತಿಯಿಂದ ದಿನಾಂಕ:19/02/1991 ರಿಂದ ಪೂರ್ವಾನ್ವಯವಾಗುವಂತೆ ಕರಾವಳಿ ಜಲಕೃಷಿಯನ್ನು ಕೈಬಿಡಲಾಗಿರುತ್ತದೆ. ಆದ್ದರಿಂದ ಪ್ರಸ್ತುತ ಕರಾವಳಿ ಜಲಕೃಷಿಯು ಕರಾವಳಿ ನಿಯಂತ್ರಣ ವಲಯ ಅಧಿಸೂಚನೆ ವ್ಯಾಪ್ತಿಗೆ ಒಳಪಡುವುದಿಲ್ಲ.<br><br>ಮುಂದುವರೆದು, ಅಭಿವೃದ್ಧಿ ನಿಷಿದ್ಧ ಪ್ರದೇಶ ವ್ಯಾಪ್ತಿಯಿಂದ ಹೊರಗೆ ಅಂದರೆ ನದಿಯ ಭರತರೇಖೆಯಿಂದ 50 ಮೀ ಹಾಗೂ ಸಮುದ್ರ ಭರತರೇಖೆಯಿಂದ 200 ಮೀಟರ್ ಹೊರಗಿರುವ ಪ್ರದೇಶಗಳಲ್ಲಿ ಕರಾವಳಿ ಜಲಕೃಷಿಯನ್ನು ಕೈಗೊಳ್ಳಲು ಅವಕಾಶವಿದ್ದು, ಇದಕ್ಕಾಗಿ ಕರಾವಳಿ ಜಲಕೃಷಿ ಪ್ರಾಧಿಕಾರ ಕಾಯ್ದೆ (ಸಿ.ಎ.ಎ) 2005 ರಂತೆ ಕರಾವಳಿ ಜಲಕೃಷಿ ಪ್ರಾಧಿಕಾರ, ಚೆನ್ನೈನಲ್ಲಿ ಜಲಕೃಷಿ ಕೇಂದ್ರಗಳನ್ನು ನೋಂದಣಿ ಮಾಡಿಸುವುದು ಕಡ್ಡಾಯವಾಗಿರುತ್ತದೆ.<br><br>**2) ಮೀನು ಸಂಸ್ಕರಣಾ ಘಟಕಗಳನ್ನು ಸ್ಥಾಪಿಸುವ ಬಗ್ಗೆ:**<br><br>ಕರಾವಳಿ ನಿಯಂತ್ರಣ ವಲಯ ಅಧಿಸೂಚನೆ, 2019 ಪ್ಯಾರಾ 4(iii)ರ ಪ್ರಕಾರ ಹೊಸ ಮೀನು ಸಂಸ್ಕರಣಾ ಘಟಕಗಳನ್ನು ಸ್ಥಾಪಿಸುವುದನ್ನು ನಿಷೇಧಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಮೀನು ಸಾಕಾಣಿಕಾ ಮತ್ತು ಸಂಸ್ಕರಣ ಘಟಕ ಸ್ಥಾಪನೆ ಕುರಿತು ಪ್ರಮಾಣೀಕೃತ ಕಾರ್ಯವಿಧಾನ ಉದ್ಭವಿಸುವುದಿಲ್ಲ. |
| ಆ) | ಮೀನು ಸಾಕಾಣಿಕಾ ಘಟಕಗಳನ್ನು ಸ್ಥಾಪಿಸಲು ಕಡ್ಡಾಯವಾಗಿ ಯಾವ ಯಾವ ಇಲಾಖೆಗಳ / | ಹೊಸ ಮೀನು ಸಾಕಾಣಿಕಾ ಘಟಕಗಳನ್ನು ಸ್ಥಾಪಿಸಲು ಕರಾವಳಿ ಜಲಕೃಷಿ ಪ್ರಾಧಿಕಾರ (Coastal Aquaculture Authority) ಮೂಲಕ ಅನುಮತಿ ಪಡೆಯಬೇಕಾಗಿರುತ್ತದೆ. ಆಸಕ್ತ ಮೀನು ಕೃಷಿಕರು ಆನ್‌ಲೈನ್ ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಿರುವುದನ್ನು ಜಲವಿಸ್ತೀರ್ಣದ |

| | | |
|---|---|---|
| | ಪ್ರಾಧಿಕಾರಗಳ ಅನುಮತಿ ಪಡೆಯಬೇಕು; ಪ್ರಕ್ರಿಯೆಯ ಪ್ರಮಾಣೀಕೃತ (ಎಸ್ ಓ ಪಿ) ಕಾರ್ಯವಿಧಾನಗಳೇನು; | ಆಧಾರದ ಮೇಲೆ ಹಾಗೂ ಕರಾವಳಿ ಜಿಲ್ಲೆಗಳ ಆಯಾ ಉಪ ವಿಭಾಗಾಧಿಕಾರಿಗಳ ಸಮಿತಿಯಲ್ಲಿ ಶಿಫಾರಸ್ಸು ಮಾಡಿ ಕರಾವಳಿ ಜಲಕೃಷಿ ಪ್ರಾಧಿಕಾರದ ಮೂಲಕ ನೋಂದಣಿ ಮಾಡಿಕೊಳ್ಳಬೇಕಾಗುತ್ತದೆ.<br><br>ಸದರಿ ಪ್ರಾಧಿಕಾರವು, ಕರಾವಳಿ ಜಲಕೃಷಿ ಪ್ರಾಧಿಕಾರ ಕಾಯ್ದೆ (ಸಿ.ಎ.ಎ) 2005 ರಲ್ಲಿನ ಕಾರ್ಯವಿಧಾನಗಳನ್ವಯ ಮೀನು ಸಾಕಾಣಿಕಾ ಘಟಕಗಳಿಗೆ ಅನುಮತಿ ನೀಡಲಾಗುತ್ತಿದೆ. |
| ಇ) | ಕಳೆದ 3 ವರ್ಷಗಳಲ್ಲಿ ಪ್ರಸ್ತುತ ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಎಷ್ಟು ಮೀನು ಸಾಕಾಣಿಕಾ ಘಟಕಗಳಿಗೆ ಅನುಮತಿ ನೀಡಲಾಗಿದೆ; CRZ ನಿಯಮ ಉಲ್ಲಂಘಿಸಿ ಸ್ಥಾಪಿಸಲಾದ ಮೀನು ಸಾಕಾಣಿಕಾ ಘಟಕಗಳ ಸಂಖ್ಯೆ ಎಷ್ಟು; ಅವುಗಳ ವಿರುದ್ಧ ಕೈಗೊಂಡಿರುವ ಕ್ರಮಗಳೇನು; | ಕಳೆದ 3 ವರ್ಷಗಳಲ್ಲಿ ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಒಟ್ಟು 56 ಮೀನು ಸಾಕಾಣಿಕೆ ಘಟಕಗಳಿಗೆ ಅನುಮತಿ ಪಡೆಯಲಾಗಿದೆ.<br><br>CRZ ನಿಯಮ ಉಲ್ಲಂಘಿಸಿ ಸ್ಥಾಪಿಸಲಾದ ಮೀನು ಸಾಕಾಣಿಕಾ ಘಟಕಗಳು ಯಾವುದು ಇರುವುದಿಲ್ಲವಾದ್ದರಿಂದ ಕ್ರಮಕೈಗೊಳ್ಳುವ ಪರಿಸ್ಥಿತಿ ಉದ್ಭವಿಸುವುದಿಲ್ಲ. |
| ಈ) | CRZ ವಲಯದಲ್ಲಿ ಪರಿಸರ ಸಂರಕ್ಷಣೆ ಹಾಗೂ ಸ್ಥಳೀಯ ಮೀನುಗಾರರ ಹಿತಾಸಕ್ತಿ ಕಾಪಾಡಲು ವಿವಿಧ ಇಲಾಖೆಗಳ ಸಮನ್ವಯದ ಮೂಲಕ ಕೈಗೊಂಡಿರುವ ನಿಯಂತ್ರಣ ಹಾಗೂ ಮೇಲ್ವಿಚಾರಣೆಯ ಕ್ರಮಗಳೇನು? | CRZ ವಲಯದಲ್ಲಿ ಪರಿಸರ ಸಂರಕ್ಷಣೆ ಹಾಗೂ ಸ್ಥಳೀಯ ಮೀನುಗಾರರ ಹಿತಾಸಕ್ತಿ ಕಾಪಾಡಲು ಕಾಲಕಾಲಕ್ಕೆ ತರಬೇತಿ ಮತ್ತು ಮಾಹಿತಿ ಕಾರ್ಯಾಗಾರವನ್ನು ನಡೆಸಲಾಗುತ್ತದೆ. ಮೇಲ್ವಿಚಾರಣೆ ಕ್ರಮವಾಗಿ ಜಲಕೃಷಿ ಫಾರಂಗಳ ನವೀಕರಣ ವೇಳೆ ಉಪವಿಭಾಗಾಧಿಕಾರಿಗಳ ಹಾಗೂ ಇಲಾಖಾ ಅಧಿಕಾರಿಗಳ ಸಮಿತಿಯಲ್ಲಿ ಪರಿಶೀಲಿಸಲಾಗುತ್ತದೆ.<br><br>ಮೀನುಗಾರರಿಗೆ ಅರಿವು ಮೂಡಿಸಲು ಹಾಗೂ ಮತ್ತಷ್ಟು ಉತ್ತೇಜಿಸಲು ಇತ್ತೀಚೆಗೆ ದಿನಾಂಕ: 13/02/2026 ರಂದು ಕುಮಟಾ, ಉತ್ತರ ಕನ್ನಡ ಜಿಲ್ಲೆಯಲ್ಲಿ ಮೀನುಗಾರಿಕೆ ಇಲಾಖೆ, ಕರ್ನಾಟಕ ಸರ್ಕಾರ ಹಾಗೂ ಕರಾವಳಿ ಜಲಕೃಷಿ ಪ್ರಾಧಿಕಾರ ಚೆನ್ನೈರವರ ಸಹಯೋಗದೊಂದಿಗೆ ಒಂದು ದಿನದ "Organisation of State-Level Workshop on Coastal Aquaculture" ಕುರಿತು ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದ್ದು, ಸದರಿ ಕಾರ್ಯಾಗಾರದಲ್ಲಿ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ಕೇಂದ್ರ ಸರ್ಕಾರದ ಸಂಸ್ಥೆಯಾದ ಸಮುದ್ರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರ, ಕೇಂದ್ರೀಯ ಸಮುದ್ರ ಮೀನುಗಾರಿಕೆ ಸಂಶೋಧನಾ ಸಂಸ್ಥೆಗಳು ಭಾಗವಹಿಸಿ ಕರಾವಳಿ ನಿಯಂತ್ರಣ ವಲಯದಲ್ಲಿ ಮೀನುಗಾರಿಕೆ ಕುರಿತು ಹಾಗೂ ಕರಾವಳಿ ಜಲಕೃಷಿ ನೀತಿಗಳ ಬಗ್ಗೆ ಸಂಬಂಧಪಟ್ಟ ತಜ್ಞರು ತಾಂತ್ರಿಕ ಅಧಿವೇಶನಗಳ ಮೂಲಕ ಮೀನುಗಾರರಿಗೆ / ಮೀನು ಕೃಷಿಕರಿಗೆ ಜಾಗೃತಿ ಮೂಡಿಸಲಾಗಿದೆ. |

ಸಂಖ್ಯೆ: ಪಸಂಮೀ/105/ಮೀಇಮೀ/2026

(ಮಂಕಾಳ ಎಸ್. ವೈದ್ಯ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು